**ಎಸ್.ಸಿ.ಸಂಖ್ಯೆಃ 10047/2025**
**ಪ್ರಾ.ಸಾ.ಸಂಖ್ಯೆಃ 01**
**ಚಾ.ಸಾ.ಸಂಖ್ಯೆಃ 03**

**ಪೀಠಾಸೀನಾಧಿಕಾರಿಗಳು, 03 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ**

**ನ್ಯಾಯಾಧೀಶರು , ಬಾಗಲಕೋಟೆ, ಉಪಸ್ಥಿತಿಃ ಮುಧೋಳ**

**ಎಸ್.ಸಿ.ಸಂಖ್ಯೆಃ 10047/2025**

| | |
|---|---|
| ಹೆಸರುಃ | ಗುರುನಾಥ ಹಿರಲಕ್ಕಿ |
| ತಂದೆಯ ಹೆಸರುಃ | ರಾಣಪ್ಪ |
| ವಯಸ್ಸುಃ | 69 ವರ್ಷ |
| ಉದ್ಯೋಗಃ | ಕೂಲಿ ಕೆಲಸ |
| ವಾಸಃ | ಮುಧೋಳ |

**ಸಾಕ್ಷಿಯನ್ನು ದಿಃ 05.12.2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ-**

1. ನನಗೆ ಚಾಸಾ-4 ಇವರ ಪರಿಚಯ ಇದೆ. ನನಗೆ ಆರೋಪಿತರ ಪರಿಚಯ ಇಲ್ಲ. ಅವರ ನಡುವಿನ ಜಗಳ ಗೊತ್ತಿಲ್ಲ. ಈಗ ನೋಡುತ್ತಿರುವ ಪಂಚನಾಮೆಯ ಮೇಲೆ ನನ್ನ ಹೆಬ್ಬೆರಳ ಮುದ್ರೆ ಪಡೆದಿದ್ದಾರೆ. (ಸಾಕ್ಷಿದಾರರಿಗೆ ತೋರಿಸಿದ ಪಂಚನಾಮೆ ಗುನ್ಹಾ ಜಾಗೆಯ ಪಂಚನಾಮೆ ಇದುದ ಅದನ್ನು ನಿಪಿ-4 ಅಂತಾ, ಸಾಕ್ಷಿದಾರರು ಗುರುತಿಸಿದ ಹೆಬ್ಬೆರಳ ಗುರುತನ್ನು ನಿಪಿ-4(ಎ) ಅಂತಾ ಗುರುತಿಸಲಾಯಿತು.) ಅಲ್ಲಿ ಈಗ ನೋಡುತ್ತಿರುವ ಫೋಟೋಗಳನ್ನು ತೆಗೆದಿದ್ದಾರೆ. ಸದರಿ ಫೋಟೋಗಳನ್ನು ಭಾರತೀಯ ಸಾಕ್ಷ್ಯ ಅಧಿನಿಯಮ 65 ಬಿ ನೇದ್ದರ ಅಡಿಯಲ್ಲಿಯ ಪ್ರಮಾಣ ಪತ್ರ ಲಭ್ಯ

**ಎಸ್.ಸಿ.ಸಂಖ್ಯೆಃ 10047/2025**
**ಪ್ರಾ.ಸಾ.ಸಂಖ್ಯೆಃ 01**
**ಚಾ.ಸಾ.ಸಂಖ್ಯೆಃ 03**

ಇರುವುದನ್ನು ಧೃಡಪಡಿಸಿಕೊಂಡು ನಿಶಾನೆ ಹಾಕಲಾಗಿದೆ. (ಸದರಿ ಫೋಟೋಗಳನ್ನು ನಿಪಿ-5 ಹಾಗೂ 6 ಅಂತಾ ಗುರುತಿಸಲಾಯಿತು.) ನನ್ನ ಸಮಕ್ಷಮದಲ್ಲಿ ಯಾವುದೇ ಪಂಚನಾಮೆ ಮಾಡಿಲ್ಲ. ಯಾವುದೇ ವಸ್ತುಗಳನ್ನು ಜಪ್ತು ಮಾಡಿಕೊಂಡಿಲ್ಲ. ನಿಪಿ-5 ಹಾಗೂ 6 ಇವುಗಳನ್ನು ಯಾವ ಕಾರಣಕ್ಕಾಗಿ ತೆಗೆಸಿದ್ದಾರೆ ಗೊತ್ತಿಲ್ಲ. ಪಂಚನಾಮೆಯಲ್ಲಿ ಏನು ಬರೆದಿದ್ದಾರೆ ಅಂತಾ ಗೊತ್ತಿಲ್ಲ.

**(ಈ ಹಂತದಲ್ಲಿ ಸರಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಲು ಮನವಿ ಮಾಡಿದ್ದು, ಸಾಕ್ಷಿದಾರರು ಪೂರ್ಣ ಪ್ರತಿಕೂಲ ಪ್ರವೃತ್ತಿ ತೋರಿಸಿರುವುದರಿಂದ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಸರಕಾರಿ ಅಭಿಯೋಜಕರಿಗೆ ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಅನುಮತಿಸಲಾಯಿತು.)**

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-**

1. ಪೋಲೀಸರು ನನ್ನನ್ನು ಹಾಗೂ ಚಾಸಾ-2 ಕೇಶವ ಇವರನ್ನು ದಿನಾಂಕಃ 28.02.2021 ರಂದು ಚಾಸಾ-4 ಇವರ ಮನೆಯ ಮುಂದೆ ಕರೆಸಿದ್ದರು, ಅಲ್ಲಿ ಚಾಸಾ-4 ಹಾಜರಿದ್ದು ಅವರು ತೋರಿಸಿದಂತೆ ನಿಪಿ-4 ರಂತೆ ಘಟನಾ ಸ್ಥಳದ ಪಂಚನಾಮೆಯನ್ನು ಮಾಡಿ ಈಗ ನ್ಯಾಯಾಲಯದ ಮುಂದಿರುವ ಬಡಿಗೆಯನ್ನು ಜಪ್ತು ಮಾಡಿಕೊಂಡರು ಎಂದರೆ ಸರಿಯಲ್ಲ. ಅದೇ ಕಾಲಕ್ಕೆ ನಿಪಿ-5 ಹಾಗೂ 6 ಫೋಟೋಗಳನ್ನು ತೆಗೆಸಿದರು ಎಂದರೆ ಸರಿಯಲ್ಲ.

2. ನನ್ನ ಸಮಕ್ಷಮದಲ್ಲಿ ಪೋಲೀಸರು ನಿಪಿ-4 ರಂತೆ ಪಂಚನಾಮೆ ಮಾಡಿ, ಈಗ ನೋಡುತ್ತಿರುವ ಬಡಿಗೆಯನ್ನು ಜಪ್ತು ಮಾಡಿಕೊಂಡಿದ್ದು ಆ

**ಎಸ್.ಸಿ.ಸಂಖ್ಯೆಃ 10047/2025**
**ಪ್ರಾ.ಸಾ.ಸಂಖ್ಯೆಃ 01**
**ಚಾ.ಸಾ.ಸಂಖ್ಯೆಃ 03**

ಕಾರಣಕ್ಕಾಗಿ ನಿಪಿ–5 ಹಾಗೂ 6 ರಂತೆ ಫೋಟೋಗಳನ್ನು ತೆಗೆಸಿದ್ದು, ನಿಪಿ–4 ಅನ್ನು ಓದಿ, ತಿಳಿದು ಹೆಬ್ಬೆರಳ ಮುದ್ರೆ ಹಾಕಿದ್ದರೂ ಕೂಡ ಈಗ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

ಪಾಟೀ ಸವಾಲು ಇರುವುದಿಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ.ಹೇ.ಕೇ. ಸರಿ ಅದೆ.**

Sd/-

**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಮುಧೋಳ.**